5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10042/2021

ಪಿಡಬ್ಲೂ- 02
ಸಿಡಬ್ಲೂ- 02

| | | |
|---|---|---|
| ಸಾಕ್ಷಿ ಹೆಸರು | - | ಮಲ್ಲಿಕಾರ್ಜುನಗೌಡ |
| ತಂದೆ ಹೆಸರು | - | ಅಣ್ಣಾಜಿಗೌಡ |
| ವಯಸ್ಸು | - | 33 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಕಚವಿ ಗ್ರಾಮ ಸೊರಬ ತಾಲ್ಲೂಕು |

ಪ್ರಮಾಣ ವಚನ ಭೋದಿಸಿದ ದಿನಾಂಕಃ 20-10-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಪ್ರಾ ಸಾ -1 ನನ್ನ ತಂದೆ , ಚಾಸಾ-13 ನನ್ನ ಅಣ್ಣ. ಚಾಸಾ 5 ರಿಂದ ಚಾಸಾ-12 ರವರರು ಗೊತ್ತು, ಆರೋಪಿ ಗೊತ್ತು. ನಮಗೆ ಕಚವಿ ಗ್ರಾಮದ ಸರ್ವೆ ನಂಬರ್ 6 ರಲ್ಲಿ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಮೆಕ್ಕೆ ಜೋಳವನ್ನು ಬೆಳೆದಿರುತ್ತೇನೆ. ಜಮೀನಿಗೆ ಓಡಾಡುವ ವಿಚಾರದಲ್ಲಿ ಆರೋಪಿ ನಮ್ಮಜೊತೆ ಜಗಳ ಮಾಡುತ್ತಿದ್ದನು, ನಮ್ಮನ್ನು ಹೆದರಿಸುತ್ತಿದ್ದನು.

ದಿಃ 18-05-2020 ರಂದು ನಮ್ಮ ಹೊಲದಲ್ಲಿ ಬೆಳೆದ ಮೆಕ್ಕೆ ಜೋಳವನ್ನು ಮುರಿದು ನಮ್ಮ ಸ್ವಂತ ಟ್ರಾಕ್ಟರ್ ನಲ್ಲಿ ಲೋಡ್ ಮಾಡಿದ್ದೆವು . ಸದರಿ ಮೇಕ್ಕೆ ಜೋಳವನ್ನು ಲೋಡ್ ಮಾಡಲು ಕೂಲಿ ಕೆಲಸಕ್ಕೆ ಚಾಸಾ-13 , ನಾನು , ಪ್ರಾ ಸಾ -1 , ಚಾಸಾ-5 , ಚಾಸಾ9 ಮತ್ತು ಅವರ ಹೆಂಡತಿ , ಚಾಸಾ-11 ಹಾಗೂ ಅವರ ಹೆಂಡತಿ ರವರು ಬಂದಿದ್ದರು. ನಾನು ಟ್ರಾಕ್ಟರ್ ನ್ನು ಓಡಿಸುತ್ತಿದ್ದು ಟ್ರಾಕ್ಟರ್ ನಲ್ಲಿ ಪ್ರಾ ಸಾ -1 , ಚಾಸಾ-13 , ಚಾಸಾ5 ರವರು ಕುಳಿತಿದ್ದರು. ಟ್ರಾಕ್ಟರ್ ನ್ನು ಖಾಲಿ ಜಾಗದಲ್ಲಿ ಚಲಾಯಿಸಿಕೊಂಡು ಮದ್ಯಾಹ್ನ 3 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ಆರೋಪಿತನ್ನು ಬೈದು ಹೊಡೆಯುತ್ತೇನೆ ಎಂದು ಹೇಳಿದ. ಆರೋಪಿ ಟ್ರಾಕ್ಟರ್

ನ್ನು  ಹಿಡಿದಿರುತ್ತಾನೆ. ಆರೋಪಿ ಹೊಡೆಯುತ್ತೇನೆ , ಬಡಿಯುತ್ತೇನೆ, ನೋಡ್ಕೋತಿನಿ ನಿಮ್ಮನ್ನು ಎಂದು ಹೇಳಿರುತ್ತಾನೆ.

ನಂತರ ಆರೋಪಿ ಗೂಟವನ್ನು ತೆಗೆದುಕೊಂಡು ಬಂದು ನನ್ನ ತಲೆಗೆ ಹೊಡೆದಿರುತ್ತಾನೆ. ಹಳೆಯ ದ್ವೇಷ ಇದ್ದಿದ್ದರಿಂದ ಆರೋಪಿ ನನ್ನನ್ನು ಹೊಡೆದಿರುತ್ತಾನೆ. ಆರೋಪಿ ಹೊಡೆದಿದ್ದರಿಂದ ನಾನು ಎಚ್ಚರ ತಪ್ಪಿ ಅಲ್ಲೆ ಬಿದ್ದಿರುತ್ತೇನೆ. ನನಗೆ ಒಂದುವರೆ ತಿಂಗಳ ನಂತರ ಪ್ರಜ್ಞೆ ಬಂದಿದ್ದು ಆಗ ನಾನು ಮ್ಯಾಕ್ಸ್ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ.

ನನಗೆ ಪ್ರಜ್ಞೆ ಬಂದ ನಂತರ ನನ್ನನ್ನು ಯಾರು ಯಾವ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ವಿರುದ್ಧ ಪ್ರಾ ಸಾ -1 ರವರು ಕೊಟ್ಟಿರುತ್ತಾರೆ ಎಂದು ನನಗೆ ಪ್ರಜ್ಞೆ ಬಂದ ನಂತರ ತಿಳಿದಿರುತ್ತದೆ. ನನಗೆ ಪ್ರಜ್ಞೆ ಬಂದ ನಂತರ ಪ್ರಾ ಸಾ -1 ರವರು  ಮ್ಯಾಕ್ಸ್ ಆಸ್ಪತ್ರೆಯಿಂದ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಗಲಾಟೆ ಬಗ್ಗೆ ವಿಚಾರಣೆ ಮಾಡಿದ್ದು ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿ ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಗೂಟವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಗೂಟವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು ಮಾ -1 ಎಂದು ಗುರುತಿಸಲಾಗಿದೆ.  ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).